**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

**www.souharda.coop, Ph: 080-23378375-80, Email:souharda@souharda.coop**

**ಸಂಖ್ಯೆ : ಸಂಸ/ಶಿವಿ/01/2020–21** **ದಿನಾಂಕ: 15.07.2020**

# ಸುತ್ತೋಲೆ

**ಇವರಿಗೆ:**

ಮಾನ್ಯ ಅಧ್ಯಕ್ಷರು./ಮುಖ್ಯಕಾರ್ಯನಿರ್ವಾಹಕರು
ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳು

**ಮಾನ್ಯರೇ,**

**ವಿಷಯ:** ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ **"ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್" (Basic Banking Certificate Course) ದಿನಾಂಕ 03 ರಿಂದ 9 ಆಗಸ್ಟ್ 2020** ರವರೆಗೆ ಆನ್‌ಲೈನ್ ತರಬೇತಿಯಲ್ಲಿ ಭಾಗವಹಿಸಲು ಸಿಬ್ಬಂದಿಯವರನ್ನು ನಿಯುಕ್ತಿಗೊಳಿಸುವ ಕುರಿತು.

ಈ ಮೇಲ್ಕಂಡ ವಿಷಯಕ್ಕೆ ತಮ್ಮ ಗಮನ ಹರಿಸಲು ಕೋರಿದೆ. ಸಂಯುಕ್ತ ಸಹಕಾರಿಯ ವಾರ್ಷಿಕ ಕಾರ್ಯಕ್ರಮಗಳಡಿಯಲ್ಲಿ ಸೌಹಾರ್ದ ಪಟ್ಟಣ ಸಹಕಾರಿಗಳ ಸಿಬ್ಬಂದಿಯವರಿಗಾಗಿ ದಿನಾಂಕ 03 ರಿಂದ 9 ಆಗಸ್ಟ್ 2020 ರವರೆಗೆ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ 60 ಜನರಿಗೆ ಭಾಗವಹಿಸಲು ಅವಕಾಶವಿದೆ. ದೇಶದೆಲ್ಲೆಡೆ ಕೋರೊನಾ ವೈರಸ್ ಹರಡುತ್ತಿರುವುದರಿಂದ ಈ ಬಾರಿ ತರಬೇತಿ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗುತ್ತಿದೆ. ಆದ್ದರಿಂದ ಈ ತರಬೇತಿಯ ಶುಲ್ಕ ರೂ. 3,500+ಜಿಎಸ್‌ಟಿ ಬದಲಾಗಿ ತಲಾ ರೂ.2,000+18% ಜಿಎಸ್‌ಟಿಗಳನ್ನು ನಿಗಧಿಪಡಿಸಲಾಗಿದೆ.

ರಾಷ್ಟ್ರೀಕೃತ/ವಾಣಿಜ್ಯ ಬ್ಯಾಂಕುಗಳ/ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರು/ನಿವೃತ್ತ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಹಕಾರಿ ಕ್ಷೇತ್ರದ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸದ ವ್ಯವಸ್ಥೆ ಮಾಡಲಾಗುತ್ತದೆ.

ತಮ್ಮ ಸೌಹಾರ್ದ ಸಹಕಾರ ಬ್ಯಾಂಕಿನಿಂದ ತಾವು ನಿಯುಕ್ತಿಗೊಳಿಸುವ ಸಿಬ್ಬಂದಿಯ ಸಂಖ್ಯೆ, ಹೆಸರು, ವಿವರಗಳನ್ನು ಲಗತ್ತಿಸಿದ ಮಾದರಿಯಲ್ಲಿ ದಿನಾಂಕ 23.07.2020ರೊಳಗಾಗಿ ಕಳುಹಿಸಲು ಕೋರಿದೆ.

ಪು.ತಿ.ನೋ

**<u>ಕೋರ್ಸ್ ವಿವರಗಳು</u>**

| | | |
|---|---|---|
| 1. | **ಭಾಗವಹಿಸುವ ವರ್ಗ** | : ಶಾಖಾ ವ್ಯವಸ್ಥಾಪಕರು, ಕಿರಿಯ ಅಧಿಕಾರಿಗಳು/ಲೆಕ್ಕಿಗರು, ಹಾಗೂ ಹೊಸದಾಗಿ ನೇಮಕಗೊಂಡಿರುವ ಪರಿಕ್ಷಾರ್ಥ ಅಧಿಕಾರಿಗಳು |
| 2. | **ಕೋರ್ಸ್ ಅವಧಿ** | : 7 ದಿನಗಳು |
| 3. | **ಆನ್ ಲೈನ್ ತರಬೇತಿ ವಿವರ** | : ಗೋಟು ಮೀಟಿಂಗ್ ಆಪ್ ಡೌನ್ ಲೋಡ್ ಮಾಡಿಕೊಳ್ಳುವುದು |
| 4. | **ಪ್ರವೇಶ ಶುಲ್ಕ ತಲಾ** | : ರೂ. 2000+18% ಜಿಎಸ್‌ಟಿ ಒಬ್ಬರಿಗೆ |
| 5. | **ಗರಿಷ್ಟ ಅಭ್ಯರ್ಥಿಗಳ ಸಂಖ್ಯೆ** | : 60 |
| 6. | **ಕೋರ್ಸ್ ದಿನಾಂಕ** | : ದಿನಾಂಕ 03.08.2020 ರಿಂದ 09.08.2020 ರವರೆಗೆ |
| 7. | **ನೋಂದಾವಣೆಗೆ ಕೊನೆಯ ದಿನಾಂಕ** | : 23.07.2020 |

ಆನ್ ಲೈನ್ ತರಬೇತಿ ವೆಚ್ಚ ತಲಾ ರೂ. 2000+18%ಜಿಎಸ್‌ಟಿಗಳನ್ನು **'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು'** (Karnataka State Souharda Federal Cooperative Ltd., Bangalore) ಹೆಸರಿಗೆ, ಡಿಡಿ/ಚೆಕ್ ತೆಗೆದು ಕಳುಹಿಸಬೇಕು/ಹಣ ವರ್ಗಾಹಿಸಬಹುದು. ಹೆಚ್ಚಿನ ವಿವರಗಳಿಗೆ ಶ್ರೀ ವಿ.ಜೆ.ಕಾರಕೂನ (8884466710) ತರಬೇತಿ ವ್ಯವಸ್ಥಾಪಕರು, ಶ್ರೀಮತಿ ಕವಿತ (8884466722)ಕಿರಿಯ ವ್ಯವಸ್ಥಾಪಕಿ ಇವರನ್ನು ಸಂಪರ್ಕಿಸಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಿ/–

(ಶರಣಗೌಡ ಜಿ. ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010

www.souharda.coop, Ph: 080-23378375-80, E-mail: souharda@souharda.coop

## ನೋಂದಣಿ ಪತ್ರ

ಭಾವಚಿತ್ರ

**ಸಹಕಾರಿ ಬ್ಯಾಂಕಿನ ಹೆಸರು :**

**ವಿಳಾಸ :**

**ದೂರವಾಣಿ ಸಂಖ್ಯೆ :**

**ಸಂಯುಕ್ತ ಸಹಕಾರಿಯ ಸದಸ್ಯತ್ವ ಸಂಖ್ಯೆ :**

| **ಭಾಗವಹಿಸುವ ಪ್ರತಿನಿಧಿಯ ವಿವರ** | |
|---|---|
| ➤ **ಹೆಸರು :**<br>➤ **ವಿಳಾಸ :**<br>➤ **ವಾಟ್ಸ್ಆಫ್ ಸಂಖ್ಯೆ :**<br>➤ **ಇ ಮೇಲ್ :** | ➤ **ಹುದ್ದೆ :**<br>➤ **ವಿದ್ಯಾರ್ಹತೆ :**<br>➤ **ಅನುಭವ :** |

**ಶುಲ್ಕ ಪಾವತಿ ಮಾಹಿತಿ :**

ನೋಂದಾವಣಿ ಶುಲ್ಕ :

ಚೆಕ್/ಡಿಡಿ ನಂ. & ದಿನಾಂಕ :

ಬ್ಯಾಂಕ್ ಹೆಸರು :

ಸಂಯುಕ್ತ ಸಹಕಾರಿಯು ಆಯೋಜಿಸಿರುವ 07 ದಿನಗಳ ಬೇಸಿಕ್ ಬ್ಯಾಂಕಿಂಗ್ ಆನ್‌ಲೈನ್ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಭಾಗವಹಿಸಲು ಇಚ್ಛಿಸಿರುತ್ತೇನೆ ಹಾಗೂ ಕೋರ್ಸ್ ನಿಯಮಗಳಿಗೆ ಬದ್ಧನಾಗಿರುತ್ತೇನೆ.

**ಭಾಗವಹಿಸುವ ಪ್ರತಿನಿಧಿಯ ಸಹಿ**

ಮೇಲ್ಕಂಡಂತೆ ವಿವರವನ್ನು ಹೊಂದಿರುವ ನಮ್ಮ ಸಹಕಾರಿಯ ಪ್ರತಿನಿಧಿಗೆ ಕೋರ್ಸ್‌ನಲ್ಲಿ ಭಾಗವಹಿಸಲು ಅವಕಾಶ ನೀಡಲು ಕೋರಿದೆ.

**ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು**

**ಸಹಕಾರಿಯ ಮೊಹರು** **------------------ ಸಹಕಾರಿ ಬ್ಯಾಂಕ್ ನಿ.,**